# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* 160/2023

| | | | | |
|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಡಾ. ಕೃತಿಕ.ಎನ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ | ಶ್ರೀ ಸತ್ಯವೇಲು | | **05.09.2024** |
| **ವಯಸ್ಸು** | ಃ | **46** **ವರ್ಷ** | | |
| **ವೃತ್ತಿ** | ಃ | ಸಹಾಯಕ ನಿರ್ದೇಶಕರು,<br>ಆರ್.ಎಫ್.ಎಸ್.ಎಲ್, ಮೈಸೂರು | | **ಪ್ರಾ.ಸಾ. ಃ 14** |
| **ವಾಸಸ್ಥಳ** | ಃ | ಮೈಸೂರು | | **ಚಾ.ಸಾ. ಃ 22** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2011* ರಿಂದ *2020* ರವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಮತ್ತು *2020* ರಿಂದ ಈ ತನಕ ಸಹಾಯಕ ನಿರ್ದೇಶಕರಾಗಿ ಆರ್.ಎಫ್.ಎಸ್.ಎಲ್ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ದಿಃ*10.02.2022* ರಂದು ಎ.ಸಿ.ಬಿ ದೇವರಾಜ ವಿಭಾಗದ ಕೋರಿಕೆ ಪತ್ರದೊಂದಿಗೆ ಪಿ.ಸಿ–ಸಿದ್ದೇಶ್ ಇವರು ದೇವರಾಜ ಪೋಲೀಸ್ ಠಾಣೆಯ ಮೊ.ಸಂಖ್ಯೆ *5/2022* ಪ್ರಕರಣದಲ್ಲಿ *4* ಸೀಲಾದ ವಸ್ತುಗಳನ್ನು ನಮ್ಮ ಕಛೇರಿಗೆ ತಂದು ಕೊಟ್ಟಿದ್ದರು ಅದನ್ನು ನಮ್ಮ ಸ್ವಾಗತಾ ವಿಭಾಗದವರು ಸ್ವೀಕರಿಸಿ ಟಿ.ಎಸ್ *319/2022* ರಂತೆ ಸಂಖ್ಯೆ ನೀಡಿ ನಂತರ ವಿಷ ವಿಜ್ಞಾನ ವಿಭಾಗಕ್ಕೆ ಆ ವಸ್ತುಗಳನ್ನು ಮತ್ತು ಕಡತವನ್ನು ಕಳುಹಿಸಿಕೊಟ್ಟಿದ್ದರು. ಆ ವಸ್ತುಗಳನ್ನು ಪರೀಕ್ಷಿಸುವ ಕಾಲಕ್ಕೆ ತೆಗೆದು ನೋಡಿದಾಗ ಅವುಗಳ ಮೇಲಿನ ಮೊಹರುಗಳು ಸುಸ್ಥಿತಿಯಲ್ಲಿದ್ದವು ಮತ್ತು ಮಾದರಿ ಮೊಹರಿನೊಂದಿಗೆ ತಾಳೆಯಾಗುತ್ತಿತ್ತು. ಆ ವಸ್ತುಗಳ ವಿವರಗಳ ಕೆಳಕಂಡತೆ ಇವೆ.

*1.* ಜಠರ, ಸಣ್ಣ ಕರುಳಿನ ಭಾಗಗಳು

*2.* ಲಿವರ್ ಮತ್ತು ಕಿಡ್ನಿ ಭಾಗಗಳು

*3.* ರಕ್ತ

*4.* ಉಪ್ಪಿನ ದ್ರಾವಣ *(*ವಸ್ತು ಸಂಖ್ಯೆ *1* ರಿಂದ *3* ಅನ್ನು ಸಂರಕ್ಷಿಸಲು ಉಪಯೋಸಲಾಗಿದೆ*)*

ಕ್ರಮ ಸಂಖೆ *1* ರಿಂದ *3* ಮೃತ ಪ್ರಜ್ವಲ್ ಇವರಿಗೆ ಸಂಬಂಧಿಸಿದ್ದು. ಆ *4* ವಸುತಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ethyl alcohol ಎನ್ನುವ ಮಧ್ಯಸಾರದ ಅಂಶ ಕಂಡುಬಂದಿರುತ್ತದೆ. ರಕ್ತದಲ್ಲಿ ಮಧ್ಯಸಾರದ ಅಂಶ 116.20 mg ಕಂಡುಬಂದಿರುತ್ತದೆ. ಪರೀಕ್ಷೆ ಬಳಿಕ ಆ ವಸ್ತುಗಳನ್ನು ನಾಶಪಡಿಸಿ ಆ ಬಗ್ಗೆ ವರದಿ ನೀಡಿದ್ದೇನೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ*–25* ಮತ್ತು ಸಹಿಯನ್ನು ನಿ.ಪಿ*–25(*ಎ*)* ಎಂದು ಗುರುತಿಸಿದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-</u>

*2.* ಒಬ್ಬ ವ್ಯಕ್ತಿ 200mg ಗಿಂತ ಜಾಸ್ತಿ ಪ್ರಮಾಣದ alcohol ಸೇವಿಸಿದರೆ ಮಾತ್ರ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಾರೆ. ಈ ಪ್ರಕರಣದಲ್ಲಿ ಆ ವ್ಯಕ್ತಿ *116* ***mg*** ಪ್ರಮಾಣದಷ್ಟು alcohol ಸೇವಿಸಿದ್ದರಿಂದ ಸ್ವಲ್ಪ ಮತ್ತು ಬಂದಿರಬಹುದು. ಅಷ್ಟು ಪ್ರಮಾಣದ ಮತ್ತು ಇದ್ದಾಗ ಕಾಲು ಜಾರಿ ಬೀಳುವ ಸಂಭವ ಇರುತ್ತದೆ ಎಂದರೆ ಕಾಲು ಜಾರಿದರೆ ಬೀಳಬಹುದು. ಸಾಕ್ಷಿ ಸ್ವತಃ ಹೇಳುತ್ತಾರೆ ***360ml*** ನಷ್ಟು ಮಧ್ಯ ಸೇವಿಸಿದ್ದರೆ ರಕ್ತದಲ್ಲಿ ಮಧ್ಯದ ಪ್ರಮಾಣಪತ್ರ ***116mg*** ಕಂಡುಬರುತ್ತದೆ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು